# ಭಾರಿ ಬಿಲ್ಗಾರ್ತಿ!





ಎಡ ಕೈಯನ್ನು ಬಲ ಕೈಯಂತೆ ಬಳಸಲು ಸಾಧ್ಯವಾಗುವುದಿಲ್ಲ. ಇನ್ನು ಕಾಲುಗಳನ್ನು ಕೈಯಂತೆಯೂ ಕೈಗಳನ್ನು ಕಾಲುಗಳಂತೆಯೂ ಬಳಸುವುದು ಸಾಧ್ಯವೇ?! ಬಹಳಷ್ಟು ಜನರಿಗೆ ಇದನ್ನು ಕಲ್ಪಿಸಲು ಆಗುವುದಿಲ್ಲ. ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು. ನಾನು ಕಾಲನ್ನು ಕೈಯಂತೆಯೂ; ಕೈಯನ್ನು ಕಾಲಂತೆಯೂ ಬಳಸಬಲ್ಲೆ ಎನ್ನುತ್ತಾಳೆ 24ರ ಹರೆಯದ ಅಮೇರಿಕನ್ ಹುಡುಗಿ ಲೈಲಿಯಾ ಸ್ಟೆಪನೋವಾ.

ನಿತ್ಯದ ವ್ಯಾಯಾಮ ಹಾಗೂ ಸಾಧನೆಯಿಂದ ಇವಳ ದೇಹ ಹುರಿಗೊಂಡಿದೆ. ಮೈಯಲ್ಲಿ ಎಲುಬುಗಳೇ ಇಲ್ಲವೇನೋ ಎಂಬಂತೆ ಇವಳ ದೇಹ ಎತ್ತ ಬೇಕಾದತ್ತ ಬಿಲ್ಲಿನಂತೆ ಬಾಗುತ್ತದೆ–ಹೊರಳುತ್ತದೆ. ಅವಳು ಕೈಗಳ ಮೇಲೆ ನಿಲ್ಲಬಲ್ಲಳು ಹಾಗೂ ನಡೆಯಬಲ್ಲಳು. ಕಾಲ್ಬೆರಳುಗಳನ್ನು ಕೈಬೆರಳುಗಳಷ್ಟೇ ಕುಶಲತೆಯಿಂದ ಬಳಸಬಲ್ಲಳು.

ಆಕೆ ಅಮೆರಿಕದ ಅದ್ಭುತ ಬಿಲ್ಗಾರ್ತಿ. ಕೈಗಳ ಮೇಲೆ ನಿಂತು ಶರೀರವನ್ನು ಸಮತೂಕಾವಸ್ಥೆಯಲ್ಲಿ ನಿಲ್ಲಿಸಬಲ್ಲಳು. ಮೇಲಿರುವ ಕಾಲುಗಳ ಬೆರಳುಗಳಿಂದ ಬಿಲ್ಲು–ಬಾಣಗಳನ್ನು ಹಿಡಿಯಬಲ್ಲಳು. ತಲೆ ಎತ್ತಿ ಗುರಿಯನ್ನು ನಿಖರವಾಗಿ ನೋಡಬಲ್ಲಳು. ಕಾಲಿನಿಂದಲೇ ಬಿಲ್ಲಿಗೆ ಹೆದೆ ಏರಿಸಿ ಗುರಿಗೆ ಬಾಣವನ್ನು ನಾಟಿಸಬಲ್ಲಳು.

ಲೈಲಿಯಾಳ ಈ ಸಾಮರ್ಥ್ಯ ಮಹಾಭಾರತದ ಅರ್ಜುನನಿಗೆ ಸರಿಸಮಾನವಾದುದು. ಆತ ಕುದಿಯುವ ಎಣ್ಣೆಯಲ್ಲಿ ಮೇಲೆ ತಿರುಗುವ ಮೀನಿನ ಬಿಂಬವನ್ನು ನೋಡಿ. ಅದರ ಕಣ್ಣಿಗೆ ಗುರಿ ಇಟ್ಟು ಹೊಡೆದಿದ್ದನಂತೆ. ಈಕೆ ನೇರವಾಗಿ ಗುರಿಯನ್ನು ನೋಡಿದರೂ ಗುರಿ ಇಟ್ಟು ಹೊಡೆಯಲು ಬಳಸಿದ್ದು ಕಾಲಿನ ಬೆರಳುಗಳನ್ನು ಎಂಬುದು ಅಚ್ಚರಿಯ ಸಂಗತಿ. ಆಗ ಅರ್ಜುನ ತನ್ನ ನೈಪುಣ್ಯತೆಯಿಂದ ದ್ರೌಪದಿಯನ್ನು ಗೆದ್ದುಕೊಂಡಿದ್ದರೆ; ಈಗ ಈ ಲೈಲಿಯಾ ಅಮೆರಿಕದ ಜಾಣ–ಜಾಣೆಯರ ಸ್ಪರ್ಧೆಯಲ್ಲಿ ಉಪಾಂತ್ಯವನ್ನು ಪ್ರವೇಶಿಸಿದ್ದಾಳೆ. ಅಮೆರಿಕ ದೇಶದ ಬಹಳಷ್ಟು ಸ್ಥಾನಗಳಲ್ಲಿ ಲೈಲಿಯಾಳ ಈ ಪ್ರದರ್ಶನ ಜನರಿಗೆ ಖುಷಿ ಕೊಡುತ್ತದೆ.



■ ಸುಭಾಸ ಯಾದವಾಡ